MYSORE LEGISLATIVE ASSEMBLY

Friday, 30th June 1967.

The House met in the Assembly Chamber, Vidhana Soudha, Bangalore, at Twelve of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Cauvery Water Supply Scheme

*Q.—50. Sri VATAL NAGARAJ (Chickpet).—

Will the Minister for Municipal Administration be pleased to state :—

(*a*) whether the World Bank have refused fully the assistance requested by Government to implement the Cauvery Scheme of supplying Water to Bangalore City ;

(*b*) if so, the reasons for the same ?

*A.—Sri R. M. PATIL (Minister for Municipal Administration).—

(*a*) No.

(*b*) Does not arise in view of reply to (*a*) above.

ಶ್ರೀ ವಾಟಾಳ್ ನಾಗರಾಜ್.—ವಿಶ್ವ ಬ್ಯಾಂಕಿನಿಂದ ಇದಕ್ಕೆ ಸಾಲ ದೊರಕುವ ಬಗ್ಗೆ ನಿರ್ದಿಷ್ಟವಾದ ಭರವಸೆ ಏನಾದರೂ ಬಂದಿದೆಯೇ, ಸ್ವಾಮಿ ?

ಶ್ರೀ ಆರ್. ಎಂ. ಪಾಟೀಲ್.—ಈಗ ಅವರು ತಮ್ಮ ತಜ್ಞರನ್ನು ನೇಮಿಸಿರುವುದರಿಂದ ಅವರ ಮನಸ್ಸಿನಲ್ಲಿ ಸಾಲ ಕೊಡಬೇಕೆಂಬ ಉದ್ದೇಶವಿದೆ ಎಂದು ಅರ್ಥವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಈ ಯೋಜನೆ ಎಷ್ಟು ದಿವಸದೊಳಗೆ ಮುಗಿಸಿ ಬೆಂಗಳೂರು ಜನತೆಗೆ ಕಾವೇರಿ ನೀರನ್ನು ಕೊಡುತ್ತಾರೆ, ಸ್ವಾಮಿ ?

ಶ್ರೀ ಆರ್. ಎಂ. ಪಾಟೀಲ್.—ಈ ಕಾರ್ಯ ಆರಂಭವಾದಂದಿನಿಂದ ಐದು ವರ್ಷದೊಳಗೆ ಈ ಯೋಜನೆ ಪೂರ್ತಿಯಾಗುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಸಿದ್ದಯ್ಯ ಕಾಶೀಮಠ.—ಈ ಪ್ರಾಜೆಕ್ಟಿಗೆ ವಿಶ್ವ ಬ್ಯಾಂಕಿನಿಂದ ಎಷ್ಟು ಸಾಲ ಕೇಳಿದ್ದೀರಿ ?

ಶ್ರೀ ಆರ್. ಎಂ. ಪಾಟೀಲ್.—ಇಷ್ಟು ಎಂದು ನಿರ್ದಿಷ್ಟವಾಗಿಲ್ಲ. ಒಟ್ಟು ವೆಚ್ಚದಲ್ಲಿ ಸೇಕಡ 40-50ರಷ್ಟು ದೊರೆಯಬಹುದು ಅಥವಾ ಕೇಳುವಂಥ ಪ್ರಸಂಗ ಬರಬಹುದು.

ಶ್ರೀ ವಾಟಾಳ್ ನಾಗರಾಜ್.—ಬರಬಹುದು, ದೊರೆಯಬಹುದು ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ತಮ್ಮ ಮೇಲೆ ಅವರಿಗೆ ನಂಬಿಕೆ ಇಲ್ಲದೆ ಹಣವನ್ನು ಕೊಡದೆ ಇದ್ದರೆ, ಸರ್ಕಾರ ದವರೇ ಆ ಕಾರ್ಯವನ್ನು ಪೂರ್ತಿ ಮಾಡುತ್ತಾರೆಯೇ, ಸ್ವಾಮಿ ?

Mr. SPEAKER.—It is a hypothetical question.

Sri C. K. RAJAIAH SHETTY.—May I know whether any foreign exchange is involved ?

ಶ್ರೀ ಆರ್. ಎಂ. ಪಾಟೀರ್.—ತಜ್ಞರ ಅಭಿಪ್ರಾಯದ ಪ್ರಕಾರ ಸೇಕಡ 40-50 ಫಾರಿನ್ ಎಕ್ಸ್‌ಛೇಂಜ್ ಬರಬಹುದು. ಇಷ್ಟೇ ಬರುತ್ತದೆ ಎಂದು ನಿರ್ದಿಷ್ಟವಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್.—ವಿಶ್ವ ಬ್ಯಾಂಕಿನವರು ತಮ್ಮ ಕಾರ್ಯದ ಬಗ್ಗೆ ಅತ್ಯಪ್ತರಾಗಿ, ಬೇಕಾದ ಹಣವನ್ನು ಕೊಡದೆ ಇದ್ದರೆ ಸರ್ಕಾರದವರು ಆ ಕಾರ್ಯವನ್ನು ಪೂರ್ತಿ ಮಾಡುತ್ತಾರೆಯೇ ?

ಶ್ರೀ ಆರ್. ಎಂ. ಪಾಟೀರ್.—ನಮ್ಮ ಕಾರ್ಯದ ಬಗ್ಗೆ ಎನ್ನುವಂಥ ಮಾತನ್ನು ಒಪ್ಪುವುದಕ್ಕಾಗುವುದಿಲ್ಲ. ಅತ್ಯಪ್ತಿ ಎನ್ನುವಂಥ ಪ್ರಶ್ನೆ ನಮ್ಮ ಕಾರ್ಯದ ಬಗ್ಗೆ ಬರುವಂಥದ್ದು ಇಲ್ಲಿ ಉದ್ಭವವಾಗುವುದಿಲ್ಲ. ಆದರೆ ಒಂದು ವೇಳೆ ಇತರ ಯಾವುದೇ ಕಾರಣದಿಂದ ವಿಶ್ವ ಬ್ಯಾಂಕ್ ನವರು ಹಣ ಕೊಡದೆ ಇದ್ದರೆ ಅದಕ್ಕೆ ಬೇರೆ ಮಾರ್ಗವನ್ನು ಯೋಚನೆ ಮಾಡಬೇಕಾಗುತ್ತದೆ.

Sri H. C. LINGA REDDY.—May I know whether any work at all has been done and if so, whether any amount has been spent pending negotiations with the World Bank and the Government of India ?

Sri R. M. PATIL.—Preliminary work has been going on.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಕಳಿಸಿರುವುದು ಟೆಕ್ನಿಕಲ್ ಮ್ಯಾಟರ್ಸ್‌ಗೆ ಸಂಬಂಧಪಟ್ಟ ಅಂಕಿ ಅಂಶ ಸಂಗ್ರಹಿಸುವುದಕ್ಕೆ ಮಾತ್ರವೋ ಅಥವಾ ಸಾಲ ಕೊಡುವ ವಿಚಾರವನ್ನೂ ವ್ಯಕ್ತ ಮಾಡಿ ಅವರ ಕೆಲಸ ಮಾಡುವುದಕ್ಕೋ?

ಶ್ರೀ ಆರ್. ಎಂ. ಪಾಟೀರ್.—ಭಾರತ ಸರಕಾರದವರು ಸಹಾಯನೀಡುವುದಾಗಿ ಸ್ಪಷ್ಟವಾಗಿ ಹೇಳಿದ್ದಾರೆ. ಅದರ ಮೇಲೆ ಕೆಲಸ ಮುಂದುವರೆಸಿಕೊಂಡು ಹೋಗುತ್ತಿದ್ದೇವೆ.

ಶ್ರೀ ಎಸ್. ಗೋಪಾಲ ಗೌಡ.—ಜನರಿಗೆ ಹೊರೆಯಾದರೆ ಪುನರ್ವಿಮರ್ಶೆ ಮಾಡುವುದಾಗಿ ಹೇಳಿದಿರಿ.

ಶ್ರೀ ಆರ್. ಎಂ. ಪಾಟೀರ್.—ಮಾಡುವ ಪ್ರಸಂಗ ಬರುತ್ತದೆಂದು ಹೇಳಿದೆ.

ಶ್ರೀ ಎಸ್. ಗೋಪಾಲ ಗೌಡ.—ಮೊದಲು ಯೋಚನೆ ಮಾಡಿದ ಹಾಗೆ ಹಣ ಮತ್ತು ವಿದೇಶವಿನಿಮಯ ದೊರೆಯುತ್ತದೆಂದು ನಂಬಿದ್ದೀರಾ ?

ಶ್ರೀ ಆರ್. ಎಂ. ಪಾಟೀರ್.—ನಂಬಿಕೆಯಿಟ್ಟೇ ಕೆಲಸ ಮಾಡುತ್ತಿದ್ದೇವೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಈ ಯೋಜನೆ ಪ್ರಕಾರ ಕಾವೇರಿಯಿಂದ ಎಷ್ಟು ನೀರು ಪಂಪು ಮಾಡಬೇಕೆಂಬ ಉದ್ದೇಶವಿದೆ ?

Sri R. M. PATIL.—That is a matter of detail, if a separate question is put, I shall furnish the answer.

ಶ್ರೀ ಸಿ. ಆರ್. ರಂಗೇ ಗೌಡ.—ಬೆಂಗಳೂರಿಗೆ ಉಚಿತ ನೀರು ಸರಬರಾಯಿ ಮಾಡಬೇಕೆಂದು ಹೇಳುತ್ತಿರುವುದರಿಂದ ಹಣ ತಂದು ನೀರನ್ನು ಸರಬರಾಯಿ ಮಾಡಿದ ಮೇಲೆ ಪುನಃ ವಾಪಸು ಕೊಡಲು ಸಾಧ್ಯವೇ ಎಂದು ವಿಶ್ವ ಬ್ಯಾಂಕಿನವರು ಯೋಚನೆ ಮಾಡುತ್ತಿದ್ದಾರೆಂದು ಹೇಳುವುದು ನಿಜವೇ ?

ಶ್ರೀ ಆರ್. ಎಂ. ಪಾಟೀರ್.—ಅವರು ಎಲ್ಲವನ್ನೂ ಯೋಚನೆ ಮಾಡುತ್ತಿದ್ದಾರೆ.

ಶ್ರೀ ಸಿದ್ದಯ್ಯ ಕಾಶೀಮಠ.—ವಿಶ್ವ ಬ್ಯಾಂಕಿನಿಂದ ಸಾಲ ಪಡೆಯುವುದೇ ಬೆಂಗಳೂರಿಗೆ ನೀರು ಸರಬರಾಯಿ ಮಾಡಲು ತೊಂದರೆಯೇನಿದೆ ?

ಶ್ರೀ ಆರ್. ಎಂ. ಪಾಟೀಲ್.—ಹಣದ ತೊಂದರೆಯಿದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—38 ಕೋಟಿ ಅಂದಾಜಿದ್ದುದು ಜಾಸ್ತಿಯಾಗಿದೆ ಎಂಬ ವರ್ತಮಾನವಿರುವುದು ಜವೇ ?

ಶ್ರೀ ಆರ್. ಎಂ. ಪಾಟೀಲ್.—ಆಗಿಲ್ಲ.

Major and Medium Irrigation Projects

*Q.—14. Sri C. K. RAJAIAH SHETTY (Chiknayakanahally).—

Will the Minister for Public Works be pleased to state :—

(*a*) the estimated cost of different Major and Medium Irrigation Projects taken up in III Plan period and also the cost of spilled over Major and Medium Projects of 1st and 2nd Plans ;

(*b*) the outlay of above Projects in III Plan period ;

(*c*) the list of above Projects completed in III Plan period ?

A.—Sri VEERENDRA PATIL (Minister for Public Works).—

(*a*) *Vide* statement 'A' appended.

(*b*) As per Column No. 9 of the Statement 'A'.

(*c*) *Vide* Statement 'B' appended.